AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ಮನ್ವಂತರ ಕವಿ ಕುವೆಂಪು

**ಡಾ. ರವಿಶಂಕರ್ ಎ. ಕೆ.**
ಸಹಾಯಕ ಪ್ರಾಧ್ಯಾಪಕ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ
ಬೆಂಗಳೂರು–560077
ravishankar@kristujayanti.com

ಕವಿ ಹಾಗೂ ಕೃತಿ ಈ ಎರಡೂ ಚೇತನತತ್ವದ ಪರಿಶುದ್ಧಿಗಳು. ಕೃತಿಯು ಒಡಮೂಡಲು ಆಕೃತಿಯೊಂದರ ಕಾರ್ಯ ಅತ್ಯಂತ ಶ್ರೇಷ್ಟವಾದುದು. ಅದು ಕವಿಯ ಶಕ್ತಿಯಾಗಿ ಒಡಮೂಡಿದಾಗ ಭೂತ ಘಟನೆಗಳನ್ನು ಕಲ್ಪನೆಯ ನೆವದಲ್ಲಿ ತೆರೆದಿಡುತ್ತಲೇ ಭವಿಷ್ಯದ ಸೂಕ್ಷ್ಮಗಳನ್ನು ವರ್ತಮಾನಗೊಳಿಸಲು ಸಾಧ್ಯ. ಚೇತನ ತತ್ವವೊಂದು ಅನಿಕೇತನವಾಗುವ ಕ್ರಿಯೆಯಲ್ಲಿ ವಿಚಾರವು ವ್ಯಕ್ತಿತ್ವವನ್ನು ರೂಪಿಸಿರುತ್ತದೆ. ಅದು ಧ್ಯಾನದ ಕಾರ್ಯ. ಎಲ್ಲರೂ ಹುಡುಕುವ ತೃಪ್ತಿ, ಸಿದ್ಧಿ, ಮೋಕ್ಷದ ಸಂಕೇತ.

ಕನ್ನಡ ಸಾಹಿತ್ಯವು ವಿಶ್ವಸಾಹಿತ್ಯವಾಗಿ ಕಣ್ತೆರೆಯಲು ಕನ್ನಡ ಸಂಸ್ಕೃತಿಯ ದಾಖಲು ಕಾರ್ಯ ಬೃಹತ್ತಾಗಿ ಸಾಗಿದೆ. ಇಲ್ಲಿನ ಸೃಜನಶೀಲತೆ, ವಿಮರ್ಶೆ, ಸಂಶೋಧನೆಗಳು ವಿಶ್ವಸಾಹಿತ್ಯದ ವಿವಿಧ ಶ್ರೇಷ್ಠ ಕೃತಿಗಳೊಡನೆ ನಡೆಸಿದ ನಿತ್ಯ ಅನುಸಂಧಾನವೇ ಅದರ ವಿಶಾಲತೆಗೆ ಕಾರಣವಾಗಿದೆ. ದೇಸಿಯವಾಗಿ ಸೃಷ್ಟಿಗೊಂಡ ಜಾನಪದ ಸಂಪತ್ತು, ವಚನಗಳ ವಿಶಾಲತೆ, ಕೀರ್ತನೆಗಳ ಅನುಭಾವ, ತತ್ವಪದಗಳ ತಾತ್ವಿಕ ಚಿಂತನೆಗಳು ಈ ಮಣ್ಣಿನಿಂದ ವಿಶ್ವಕ್ಕೆ ನೀಡಿದ ಕೊಡುಗೆಯೆನ್ನಬಹುದು.

ಇಂತಹ ರಸಗ್ರಹಣದೊಂದಿಗೆ ಕನ್ನಡಕ್ಕೆ ಚಿರಂತನ ಸಾಹಿತ್ಯವನ್ನು ದೀಪ್ತಿಗೊಳಿಸಿದ ಕುವೆಂಪು ಇಂದು ವಿಶ್ವಮಾನವ ಸಂಕೇತವಾಗಿ ನಮ್ಮ ಮನಮಂದಿರದಲ್ಲಿ ನೆಲೆಸಿದ್ದಾರೆ. ಇವರ ಸಾಹಿತ್ಯವನ್ನು ಮತ್ತೆ ಮತ್ತೆ ಮರುಚಿಂತನೆಗೆಗೆ ಅಳವಡಿಸುವ ಮೂಲಕ ನಮ್ಮ ಸಮಕಾಲೀನ ಗ್ರಹಿಕೆಗಳನ್ನು ವಿಸ್ತರಿಸಿಕೊಳ್ಳಲು ಹಲವು ವಿಧಾನಗಳು ಲಭಿಸುತ್ತವೆ. ಕುವೆಂಪು ಬರೆದ ಸಾಹಿತ್ಯ ಕೃತಿಗಳಲ್ಲಿ ಪ್ರತಿ ಪಾತ್ರವೂ, ಪಾತ್ರದೊಂದಿಗೆ ಅಭಿವ್ಯಕ್ತಗೊಳ್ಳುವ ಭಾವವೂ ಸಮಕಾಲೀನ ಚರ್ಚೆಗಳನ್ನು ಪ್ರಶ್ನಿಸುತ್ತಲೇ, ಉತ್ತರಿಸುತ್ತಲೇ ಸಾಗುವ ಒಳತೋಟಿಗಳಾಗಿವೆ. ಮನುಷ್ಯನು ವಿಕಾಸವಾದಂದಿನಿಂದಲೂ ಸುಲಭೋಪಾಯ ಸುಖಭೋಗಿಯಾಗಿ ಕಣ್ತೆರೆಯುತ್ತಾ ಬರುತ್ತಿರುವಾಗ ಶ್ರಮವು ಅನಿವಾರ್ಯದ ಸಂಗತಿಯಾಗಿ ಸೃಷ್ಟಿಸುತ್ತಿದೆ. ಅದನ್ನು ಮೀರಲೆತ್ನಿಸಲು ಯಂತ್ರನಾಗರೀಕತೆಯೂ ನಮ್ಮೊಂದಿಗೆ ಜೊತೆಯಾಗಿದೆ. ಆದರೆ, ಬದುಕುವ ಸುಲಭ ಮಾರ್ಗದಲ್ಲಿ ಸರಳತೆಯ ಕಾವು ಅನಿವಾರ್ಯ. ಅದು ವಿಶ್ವಮಾನವ ತತ್ವದ ಜೀವಂತಿಕೆ. ಸುಖಭೋಗಗಳ ನಿರಾಕರಣೆಯ ಚಿಕಿತ್ಸೆ. ಇಂತಹ ವಿಚಾರಗಳು ಗೋಚರಿಸಿದಾಗಲೆಲ್ಲಾ ಮನಸ್ಸಿನ ಹೊಯ್ದಾಟವುಂಟಾಗುತ್ತದೆ. ಯಾರಲ್ಲಿ ಈ ಒಳತೋಟಿ ಇರುವುದೋ ಅವರು ಆರೋಗ್ಯಯುತ ಬಾಳ್ವೆಗೆ, ಸಮಾಜದ ಸಹಹಿತಕ್ಕೆ ಮಿಡಿಯುವ ಮನಸ್ಸಿನವರಾಗಿದ್ದಾರೆ ಎಂದರ್ಥ. ಇವರು ವಿಶ್ವಮಾನವ ತತ್ವವನ್ನು ತನ್ನೊಳಗೆ ರೂಪಿಸಿಕೊಳ್ಳಬಹುದಾದ ಎಲ್ಲಾ ಸಾಧ್ಯತೆಗಳಿಗೂ ಅರ್ಹರಾಗಿದ್ದಾರೆ ಆದರೆ ಮೀರಲೆತ್ನಿಸಿ ಸೋಲುತ್ತಿರುವ ಸಂಭಾವಿತರೂ ಹೌದು.

ಸಮಕಾಲೀನ ಬದುಕಿನ ಸಹೃದಯತೆಗೆ ಕುವೆಂಪು ಸಾಹಿತ್ಯ ನೀಡಿದ ಕೊಡುಗೆಗಳನ್ನು ಅಧ್ಯಯನಮಾಡೋಣ. ಕವಿ ರಚಿಸಿದ ಕಾವ್ಯ ಲೋಕ, ನಾಟಕ ರಂಗ, ಕಥಾ ಚಿಂತನೆ, ಕಾದಂಬರಿ ಜಗತ್ತು, ವಿಮರ್ಶೆ, ಸಂಶೋಧನೆ ಹಾಗೂ ಸಂಪಾದನಾ ಕಾರ್ಯದ ಒಟ್ಟು ಅವಲೋಕನದ ಫಲಿತವೇ ವಿಶ್ವಮಾನವ ತತ್ವ. ಬೇಂದ್ರೆ ನುಡಿಯಂತೆ 'ನಾಡಿನ ಮೇಲ್ಮೆಗೆ ಸಹಾಯ, ಸಂಸ್ಕೃತಿಯ ವೃದ್ಧಿ' ಎನ್ನಬಹುದು. ಕುವೆಂಪು ಗ್ರಹಿಸಿದ ಪ್ರಕೃತಿ ಎರಡು ಬಗೆಯದ್ದು. ನಿಸರ್ಗ ಸಹಜವಾದ ಪ್ರಕೃತಿ ಹಾಗೂ ಮನುಷ್ಯ ಪ್ರಕೃತಿ. 20ನೇ ಶತಮಾನದ ಮುಕ್ಕಾಲು ಪಾಲು ಸಾಹಿತ್ಯ ಕೃತಿಗಳು ಇದೇ ಹಂಬಲದಲ್ಲಿ ಸಾಗಿದರೂ, ಸಹೃದಯರಿಗೆ ಆಪ್ತವಾದ ಜ್ಞಾನ ನೀಡಿದ್ದು ಕೆಲವು ಮಾತ್ರ. ಈ ನಿಸರ್ಗವು ಸದಾ ಕಾಲ ಸರಳ, ಸಹಜ ಹಾಗೂ ಸುಂದರವಾಗಿರುತ್ತದೆ. ಆ ಗ್ರಹಿಕೆಗಳು ಅದರೊಂದಿಗೆ ಜೀವಿಸುವ ಎಲ್ಲಾ ಜೀವಗಳಿಗೂ ತಿಳಿದಿದೆ. ಯಾವ ಜೀವವು ಸದೃಢ ಹಾಗೂ ಶಕ್ತಿಯುತ_ಪ್ರಶ್ನಾಭಿವ್ಯಕ್ತಿಯಲ್ಲವೋ ಅದು ಸದಾ ಆಳ್ವಿಕೆಗೆ ಒಳಗಾಗುತ್ತಲೇ ಇರುತ್ತದೆ. ಸಸ್ಯಲೋಕ, ಅದೆಷ್ಟೋ ಮೂಕ ನಿಶ್ಯಕ್ತ ಜೀವರಾಶಿಗಳು ಶತಮಾನಗಳಿಂದ ಆಳ್ವಿಕೆಗೆ ಒಳಗಾಗುತ್ತಲೇ ತಮ್ಮ ಇರುವಂತಿಕೆಯನ್ನು ಉಳಿಸಿಕೊಳ್ಳುತ್ತಿವೆ ಎಂದರೆ ಅವುಗಳು ಸತ್ಯ ಹಾಗೂ ಶಾಶ್ವತ ಬದುಕಿನ ದಾರಿಯಲ್ಲಿವೆ ಎಂದರ್ಥ. ಇವುಗಳೇ ಕುವೆಂಪು ಅವರ ಸಾಹಿತ್ಯದ ಮೂಲ ವಸ್ತು.

ಪುಟ್ಟಪ್ಪನು 'ಕುವೆಂಪು' ಆಗಿ ನಿರ್ಮಾಣವಾದ ಬಗೆಯು ಬರಿ ಅಕ್ಷರ ಸ್ವರೂಪದ ಬೆಳವಣಿಗೆಯಲ್ಲ. ಅದೊಂದು ತಪಸ್ಸು. ಅವರು ತಾವು ಜನಿಸಿದ ಭೂಮಿಕೆಯನ್ನು ಆಳವಾಗಿ ಅರಿತ, ಬೆರೆತ ಪ್ರಭಾವವಾಗಿದೆ. ಈ ಪ್ರಕೃತಿಯೊಂದಿಗೆ ನಡೆಸಿದ ಅನುಸಂಧಾನವು ಕೇವಲ ಹದಿನಾರು ವರ್ಷದ ಅನುಭವವಲ್ಲ. ಇಡೀ ಅವರ ಬಾಳ್ವೆಗೆ ತುಂಬಿಕೊಂಡ ಅನನ್ಯತೆ. ಅವರು ಮಲೆನಾಡಿನಿಂದ ಮೈಸೂರಿಗೆ ವಿಸ್ತರಿಸಿಕೊಂಡ ಬಗೆಯಲ್ಲಿ ಆಳವಾದ ಅಧ್ಯಯನವಿದೆ. ಪ್ರಕೃತಿಯ ಒಡನಾಟವಿದೆ. ಮಿತಸ್ನೇಹ, ಹಿತಮಾತುವಿನ ಸಂಗಾತವಿದೆ. ಅದು ಕೇವಲ ಮೈಸೂರಿಗಷ್ಟೇ ಉಳಿಯದೆ ವಿಶ್ವದೊಂದಿಗೆ ಮಿಳಿತಗೊಂಡಿದೆ. ಪ್ರಮುಖ ಸಾಹಿತ್ಯ ಕೃತಿಗಳು, ಪತ್ರಿಕೆಗಳ ಮೂಲಕ ವಿಶ್ವದ ಜನರ ಬಾಳ್ವೆ, ರಾಜಕೀಯ, ಅಧಿಕಾರಗಳ ಅವತರಣಿಕೆ ಎಲ್ಲವನ್ನೂ ನಿತ್ಯವೂ ಕುತೂಹಲವಾಗಿ ಗ್ರಹಿಸುವ ಆಪ್ತರೊಂದಿಗೆ ಚರ್ಚಿಸುವ ಸೂಕ್ಷ್ಮತೆ ಇತ್ತು. ವೇದಗಳು, ಉಪನಿಷತ್ತು, ಸಂಸ್ಕೃತದ ಬಹುಮುಖ್ಯ ಕಾವ್ಯಗಳು, ಪಾಶ್ಚಿಮಾತ್ಯರ ಪ್ರಮುಖ ಕೃತಿಗಳು, ಬರಿ ಸಾಹಿತ್ಯಕ್ಕೆ ಸೀಮಿತವಾಗದೆ ವಿಜ್ಞಾನ, ಸಮಾಜಶಾಸ್ತ್ರ, ಮನಃಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರದ ಶ್ರೇಷ್ಠಕೃತಿಗಳ ವಿಸ್ತಾರವಾದ ಓದುವಿನಲ್ಲಿ ಇವರ ಬದುಕಿನ ಬದ್ಧತೆಯು ಸೂಕ್ಷ್ಮಗ್ರಾಹಿಯನ್ನಾಗಿಸಿ ಚಿರಂತನಗೊಳಿಸಿತು.

ವಿಚಾರ ಸಾಹಿತ್ಯ

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ ಹಾಗೂ ವಿಚಾರ ಕ್ರಾಂತಿಗೆ ಆಹ್ವಾನ ಕೃತಿಗಳು ಸಮಕಾಲೀನ ಪ್ರಶ್ನೆಗಳಿಗೆ ಹಲವು ರೀತಿಯ ಚಿಂತನೆಗಳನ್ನು ಒದಗಿಸುತ್ತವೆ. 'ಸಂಯಮ ಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೇ ನಿರಂಕುಶಮತಿ' ಎಂದು ಯುವಕರನ್ನು ಆತ್ಮಶ್ರೀ(ಶ್ರೇಷ್ಠವಾದ ಮನಸ್ಸು)ಗಳನ್ನಾಗಿ ಪರಿವರ್ತಿಸುವ ಕರೆ ನೀಡಿದರು. ಎಲ್ಲಾ ಶ್ರೀಗಳಿಗೂ ದೇಹಶ್ರೀ, ಭಾವಶ್ರೀ, ಬುದ್ಧಿಶ್ರೀ, ಆತ್ಮಶ್ರೀ ಮುಖ್ಯವೆಂದಿದ್ದಾರೆ. ಇಂದು ಮತದ ಪ್ರಶ್ನೆಯೇ ಬಹುದೊಡ್ಡದಾಗಿದೆ. ನಮ್ಮ ಆಡಳಿತ ಯಂತ್ರವು ಮತವನ್ನು ಬಲವಾಗಿ ಪೋಷಿಸುತ್ತಲೇ, ಮತದಾಚೆಯ ವೈಚಾರಿಕತೆಯ ಫಲಕಗಳನ್ನು ಆದರ್ಶಗಳನ್ನು ಕಾಣಿಸುತ್ತಿದೆ. ಈ ಮತದ ಮೌಢ್ಯವೆಂದರೇನು ಎಂಬುದನ್ನು ಕುವೆಂಪು ಅವರ ನುಡಿಯಲ್ಲೇ ಗ್ರಹಿಸೋಣ.

"ಮತ ನಮಗೊಂದು ದೊಡ್ಡ ಬಂಧನವಾಗಿದೆ; ನಾಡಿನ ಏಳ್ಗೆಯ ಕುತ್ತಿಗೆಗೆ ಉರಳಾಗಿದೆ. ಪರಮಶಾಂತಿಯೂ ಪರಮಾನಂದವೂ ಆಗಿರುವ

ಪರಮೇಶ್ವರನನ್ನು ಪಡೆಯಲೆಂದು ಜೀವ ಮಾಡುವ ಪ್ರಯತ್ನವೆ ಮತದ ನಿಜಾವಸ್ಥೆ. ಆದರೆ ಈಗ ನಾವು ಮತ ಎಂದು ಕರೆದುಕೊಳ್ಳುವ ಆಚಾರ ಸಮೂಹ ಬರಿಯ ಸಾಮಾಜಿಕವಾದ ಕಟ್ಟು ಕಟ್ಟಳೆಗಳ ಕಾಡವಾಗಿದೆ. ಒಬ್ಬರನ್ನೊಬ್ಬರು ಮುಟ್ಟದಿರುವುದು, ನೋಡದಿರುವುದು; ಒಬ್ಬರೊಡನೊಬ್ಬರು ಕುಳಿತು ಭೋಜನ ಮಾಡದಿರುವುದು; ನಾಮ ಹಾಕಿಕೊಳ್ಳುವುದು; ವಿಭೂತಿ ಹಚ್ಚಿಕೊಳ್ಳುವುದು, ಮುದ್ರೆ ಹೊಡೆದುಕೊಳ್ಳುವುದು, ಶಿಲುಬೆ ಧರಿಸಿಕೊಳ್ಳುವುದು, ಕೆಲವರನ್ನು ಸಾರ್ವಜನಿಕವಾದ ಬಾವಿ ಕೆರೆಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು; ಕೆಲವರನ್ನು ದೇವಸ್ಥಾನದೊಳಕ್ಕೆ ಸೇರಿಸದಿರುವುದು; ಮತ್ತೆ ಕೆಲವರನ್ನು ಗುಡಿಯೊಳಗೆ ಹತ್ತ ಮಾರು ಮಾತ್ರ ಬರಗೊಡಿಸುವುದು; ಹಾಗೆ ಬರಗೊಡಿಸಬೇಕೇ ಬೇಡವೇ ಎಂದು ಚರ್ಚೆ ನಡೆಸುವುದು; – ಇತ್ಯಾದಿ ಕೆಲಸಕ್ಕೂ ಬಾರದ, ಶ್ರೇಯಸ್ಕರವೂ ಅಲ್ಲದ ನೂರಾರು ಆಚಾರ ವ್ಯವಹಾರಗಳ ಸಮಷ್ಟಿಯೇ ನಮ್ಮ ಮತದ ಹುರುಳಾಗಿ ಕುಳಿತಿದೆ. ಉಪನಿಷತ್ತು, ಭಗವದ್ಗೀತೆ ಮತ್ತು ಮಹಾವಿಭೂತಿಗಳು ಸಾರಿದ ಮತ್ತು ಸಾರುತ್ತಿರುವ ಅಮೃತ ಸಂದೇಶ ಅರಣ್ಯರೋದನವಾಗಿದೆ."( ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ– ಕುವೆಂಪು)

ಈ ಮತವನ್ನು ಮನುಷ್ಯನಲ್ಲಿ ಸ್ಥಾಪಿಸುವ ಉನ್ನಾರ ಇಂದು ನೆನ್ನೆಯದಲ್ಲ. ಇದನ್ನು ಕೇವಲ ಪುರೋಹಿತಶಾಹಿ ಮಾಡುತ್ತಿದೆ ಎಂದು ಭಾವಿಸಿದರೆ ಮೂರ್ಖರಾಗುತ್ತೇವೆ. ಬಣ್ಣ, ಲಿಂಗ, ಜಾತಿಗಳಲ್ಲಿ ಕೊಳೆಯುವ ಎಲ್ಲಾ ಹುಳುಗಳು ಕೂಡ ಇದನ್ನೇ ಮಾಡುತ್ತಿರುವುದು. ಬಣ್ಣ, ಲಿಂಗ, ಜಾತಿ ಇವುಗಳಲ್ಲಿ ಅಡಗಿರುವ ಸಂಸ್ಕೃತಿಯನ್ನು ಮಾನವ ಸಂಸ್ಕೃತಿಯನ್ನಾಗಿ ಸರ್ವರೂ ಅವುಗಳ ಸುಖವನ್ನು ಸವಿಯುವ ಜ್ಞಾನ ನಮಗೆ ಬೇಕಿದೆ. ಈ ಲೇಖನದಲ್ಲಿ ಎಲ್ಲಾ ಧರ್ಮದ ಪುರೋಹಿತ ಅಥವಾ ಧರ್ಮಾಂದರನ್ನು ಮುಲಾಜಿಲ್ಲದೆ ಕುವೆಂಪು ಪ್ರಶ್ನಿಸಿದ್ದಾರೆ. ಸೂಕ್ಷ್ಮವಾಗಿ ಈ ವಿಚಾರಗಳನ್ನು ಗ್ರಹಿಸಿದರೆ ಸತ್ಯ ಎಲ್ಲರಿಗೂ ತಿಳಿಯುತ್ತದೆ. ಈ ಮನುಷ್ಯನಿಗೆ ಭಯದ ಮೂಲಕ ಸುಲಭವಾಗಿ ದಾಸ್ಯನನ್ನಾಗಿ ಮಾಡಬಹುದು. ಎಲ್ಲಾ ಧರ್ಮದ ದೇವಾಲಯಗಳೂ ಇದೇ ಕೆಲಸ ಮಾಡುತ್ತಿವೆ. ಶ್ರಮಿಕನ ಬೆವರಲ್ಲಿ ಸುಖವುಣ್ಣುವ ಎಲ್ಲಾ ಕಾರ್ಯಗಳೂ ಹೀಗೆ ಇವೆ. ದೇವಾಲಯ ನಿರ್ಮಿಸಿದ ಬಡವನು ಅದೇ ದೇವಾಲಯಕ್ಕೆ ತಾನೂ ತನ್ನ ತಲೆಮಾರು ಕಾಣಿಕೆಯನ್ನರ್ಪಿಸುತ್ತಾ ಸಾಗುತ್ತದೆ. ಇಂತಹ ಬಡವರನ್ನು ಕರುಣೆಯಲ್ಲಿ ಗೆದ್ದುಕೊಳ್ಳಲು ಶ್ರೀಮಂತರು ದೇವಾಲಯಗಳಿಗೆ ಹಣ ಚೆಲ್ಲುತ್ತಾರೆ. ಸ್ವಚ್ಛ ಪರಿಸರವನ್ನು ಕಟ್ಟಿದ ಒಬ್ಬ ಶ್ರೀಮಂತನನ್ನೂ ನಾವು ನೋಡಲು ಕಷ್ಟವಾಗುತ್ತಿದೆ. ಸಮಾಜ ಸ್ವಚ್ಛವಾದರೆ ಬಡವನು ಬಡವನಾಗಿ ಉಳಿಯಲಾರ, ಅವನು ಆ ಕಸವನ್ನು ಶುಚಿಗೊಳಿಸುತ್ತಲೇ ಬದುಕು ಸಾಗಿಸಬೇಕು. ಅದೇ ತನ್ನ ಬಂಡವಾಳಶಾಹಿ ದುಡಿಮೆಗೆ ಸಂಪತ್ತು. ಹಸಿವಿಗೆ ಅನ್ನ ಸಿಗುವ ವೇಳೆಗೆ ಬ್ರೆಡ್ಡು–ಜಾಮುಗಳ ಲೇಪನ ರುಚಿಯು ಇನ್ನೂ ಹೆಚ್ಚು ಆಕರ್ಷಣೆಗೊಳಿಸಬಹುದು. ರಕ್ತ ಹೀರುವ ಕುತಂತ್ರವಿದು. ಯಾವ ಬಡವನೂ ಪ್ರಾಮಾಣಿಕವಾಗಿ ದುಡಿದು ಶ್ರೀಮಂತನಾಗುವ ತಂತ್ರಗಳು ಇಂದು ನಮ್ಮ ಸಮಾಜದಲ್ಲಿ ಲಭ್ಯವಿಲ್ಲ.

ಕುವೆಂಪು ಯುವಕರಿಗೆ ನೀಡುವ ಮತ್ತೊಂದು ಚಿಂತನೆಯೆಂದರೆ 'ಸದ್ಯಃಫಲಾಕಾಂಕ್ಷಿ'ಗುಣ ಹಾಗೂ 'ಕೀರ್ತಿ ಮೋಹ'. ಈ ಎರಡೂ ನಮ್ಮನ್ನು ನಗರಮುಖಿ ನೆಲೆಯಲ್ಲಿ ನಾಶಮಾಡುತ್ತಿರುವ ಅಸ್ತ್ರಗಳು. ಕಲಿಕೆಯ ವಯಸ್ಸಿಗೆ ದುಡಿಮೆಯ ರೋಗವಂಟಿಸಿ, ಕಲಿಕೆಯ ಅತೃಪ್ತರಾಗಿಸುವುದು. ಇಡೀ ಜೀವನ ಪೂರ್ತಿ ಅತೃಪ್ತ ಭಯದಲ್ಲಿ ದಾಸ್ಯಕ್ಕೆ ಒಳಗಾಗುವುದು. ಮುಖ್ಯ ಅಧಿಕಾರಿ ಹೊರತಾಗಿ ಎಲ್ಲರೂ ಇದರ ಫಲಾನುಭವಿಗಳೇ ಆಗಿದ್ದಾರೆ. ಕಾರಣವಿಷ್ಟೇ, ನಾವೆಲ್ಲಾ ತಾತ್ಕಾಲಿಕ ತೃಪ್ತರು. ಭವಿಷ್ಯದ ಆಲೋಚನೆ ನಮ್ಮಲ್ಲಿ ಕಡಿಮೆ. ನಮಗೆ ಅಗತ್ಯದ ಎಚ್ಚರಕ್ಕಿಂತ ಅನಗತ್ಯದ ಆಸಕ್ತಿಯೇ ಜಾಸ್ತಿ. ನಮ್ಮ ವಿರೋಧವಿರುವುದು ನಮ್ಮ ದಾಸ್ಯದ ಮೇಲಲ್ಲ. ನಾವು ಸಾಧ್ಯವಾದಷ್ಟೂ ಮತ, ದೇಶ, ದೇವರು, ಹೆಸರು, ಅಭಿಮಾನವೆಂಬ ಸೋಂಕಿಗೆ ಒಳಗಾಗಿ ನಾವು ನಮ್ಮ ಶುದ್ಧಿಯನ್ನು ಮರೆಯುತ್ತಿದ್ದೇವೆ. ಕುವೆಂಪು ರೈತನ ದೃಷ್ಟಿ ಕವಿತೆಯಲ್ಲಿ "ಎಲ್ಲರೂ ಜಿಗಣೆಗಳೆ ನನ್ನ ನೆತ್ತರಿಗೆ! ಕತ್ತಿ ಪರದೇಶಿಯಾದರೆ ಮಾತ್ರ ನೋವೆ? ನಮ್ಮವರೆ ಹದ ಹಾಕಿ ತಿವಿದರದು ಹೂವೆ?" ಎಂದು ಪ್ರಶ್ನಿಸಿದ್ದಾರೆ. ಇದನ್ನೇ ಆತ್ಮಶ್ರೀಯ ಹೋರಾಟವೆನ್ನುವುದು. ನಮ್ಮ ಶ್ರೇಷ್ಠ ಮನಸ್ಸು, ಚಿಂತನೆ, ಜ್ಞಾನಗಳಿಕೆಯ ಕಡೆಗೆ ಸಾಗಬೇಕಾದ ಎಚ್ಚರ ನಮಗೆ ಮುಖ್ಯವಿದೆ. ಇದೇ ವಿಚಾರದಲ್ಲಿ ವರ್ತಮಾನದ ಕತ್ತಿಗಳ ತಿವಿತವನ್ನು ಸ್ವಲ್ಪ ಗ್ರಹಿಸೋಣ.

ಇಂದು ನಮಗೆಲ್ಲ ಲಭಿಸುತ್ತಿರುವ ವಿದ್ಯೆಯಲ್ಲಿ ಲಾಭ–ನಷ್ಟದ ವಿಚಾರಗಳೇ ಹೆಚ್ಚು. ಹಾಜರಾತಿ, ಅಂಕ, ಅದರಲ್ಲೂ ಮೂರು ಸುಳ್ಳುಗಳಿಗೆ ಸತ್ಯವೇಷ ಹಾಕಿಸಿ, ಅವರ ಜೊತೆಯಲ್ಲಿ ಒಂದು ಸತ್ಯವನ್ನು ನಿಲ್ಲಿಸಿ ಬಹು ಆಯ್ಕೆ ನೀಡಿ ಸೋಲಿಸುವ, ಗೆಲ್ಲಿಸುವ ತಾತ್ಕಾಲಿಕ ನೆನಪಿನ ಪರೀಕ್ಷೆಗಳನ್ನು ಏನೆನ್ನುವುದು. ಇನ್ನೂ ಖಾಸಗೀ ದುಡಿಮೆಗಳೋ ರಕ್ತ ಇರುವ ತನಕ ಹೀರುವ ಲಾಭಮುಖಿ ಲೋಕಗಳು. ಇವುಗಳೇ ಭವಿಷ್ಯಕ್ಕೆ ಸುಖ–ದುಃಖಗಳನ್ನು ನೀಡುವ ಅಸ್ತ್ರಗಳೆಂದರೆ ಮನುಷ್ಯನಿಗೆ ಇಂದು ಮೌಲ್ಯ, ಆದರ್ಶ ಅನಗತ್ಯವೆನಿಸುವಂತಾಗಿದೆ. ಸ್ವಲ್ಪ ಆಲೋಚಿಸೋಣ. ನಮ್ಮ ಹಿರಿಯರೆಲ್ಲಾ ಹೀಗೆ ಯೋಚಿಸಿದ್ದರೆ ನಮಗೆ ಈ ಭೂಮಿ, ಸ್ವಚ್ಛಂಧ ಗಾಳಿ, ನಿಸರ್ಗ ಇರುತ್ತಿತ್ತೇ! ಸದ್ಯ ನಾವು ಮಾಯಾನಗರಿಯಲ್ಲಿದ್ದೇವೆ. ಎಲ್ಲವೂ ಗೊಂದಲ, ಕುತೂಹಲ ಹಾಗೂ ಮಾಯಾಜಗತ್ತು. ಇಲ್ಲಿ 'ಸದ್ಯಃಫಲಾಕಾಂಕ್ಷಿ'ಗುಣ ಹಾಗೂ 'ಕೀರ್ತಿ ಮೋಹ' ಬರದೇ ಇರಲು ಸಾಧ್ಯವೇ. ನಾವು ಕಾಣುವ ಆಕಾಂಕ್ಷಿಗಳಾಗಿದ್ದೇವೆ. ಸುಂದರವಾಗಿ, ಶ್ರೇಷ್ಠವಾಗಿ ನಮ್ಮ ಹೆಸರು, ಸಾಧನೆ ಮೊದಲಾದಂತೆ ನಾವು ನಿತ್ಯ ಕಾಣಬೇಕು. ದೊಡ್ಡ ಪ್ರಶಸ್ತಿ, ಗೌರವ, ಹುದ್ದೆ ಎಲ್ಲವೂ ನಮಗೆ ಬೇಕು. ನಾವು ಅರ್ಹರೇ ಎಂದು ಪ್ರಶ್ನಿಸಿಕೊಳ್ಳುವಾಗ ಅನರ್ಹರೇ ನಮಗೆ ಮಾದರಿಗಳು. ಆದ್ದರಿಂದ ನಾವು ಅರ್ಹರು. 'ಸದ್ಯಃಫಲಾಕಾಂಕ್ಷಿ'ಗುಣ ಹಾಗೂ 'ಕೀರ್ತಿ ಮೋಹ'ವನ್ನು ಅರ್ಥೈಸುತ್ತದೆ. ಇದರಿಂದ ಬಿಡುಗಡೆ ಹೊಂದುವ ಗುಣ ನಮಗೆ ಬೇಕಿದೆ. ಪ್ರಕೃತಿಯನ್ನು ನೋಡಿ, ಎಲ್ಲವೂ ಕಾಣಿಸುವ ಗುಣ ಹೊಂದಿದೆ. ಗಿಡ, ಮರ, ಪ್ರಾಣಿ, ಪಕ್ಷಿಗಳನ್ನೆಲ್ಲಾ ನಾವೇ ಹುಡುಕಿ ಹೋಗುತ್ತೇವೆ. ಅವು ಎಲ್ಲಿದ್ದರೂ, ಹೇಗಿದ್ದರೂ ಮೌಲ್ಯವೇ ಆಗಿರುತ್ತವೆ.

ಇನ್ನು 'ವಿಚಾರ ಕ್ರಾಂತಿಗೆ ಆಹ್ವಾನ' ಕೃತಿಯ ಚಿಂತನೆಗೆ ತೊಡಗೋಣ. ಈ ಕೃತಿಯಲ್ಲಿ ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವವರಿಗೆ ಒಂದು ಎಚ್ಚರಿಕೆ, ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ!, ಕರ್ನಾಟಕ ಇಟ್ಟ ಹೆಸರು ಕೊಟ್ಟ ಮಂತ್ರ, ಶ್ರೀ ಸಾಮಾನ್ಯ ಮತ್ತು ವಿಚಾರ ಕ್ರಾಂತಿ ಇಂತಹ ವಿಶೇಷ ಲೇಖನಗಳು ಸಂಕಲನಗೊಂಡಿವೆ. ಇದರ ವಿಚಾರಗಳು ಸಮಕಾಲೀನ ಚಿಂತನೆಗಳಿಗೆ ಪ್ರಶ್ನೋತ್ತರಗಳನ್ನು ಒದಗಿಸುವ ಕಾರಣ ಚರ್ಚೆಗೆ ಒಳಪಡಿಸಿಕೊಳ್ಳಬೇಕಿದೆ. ಕುವೆಂಪು ಅವರು 1974ರಲ್ಲಿ ಮಂಡಿಸಿದ ಇಲ್ಲಿನ ವಿಚಾರಗಳು ಇಂದಿಗೂ ಸತ್ಯವೆನಿಸುವಂತೆ ಕಾಣುತ್ತವೆ ಎಂದರೆ ಈ ಲೇಖನದ ವಿಚಾರಗಳು ಸಮಾಜದ ದೀರ್ಘಕಾಲಿಕ ಅಧೋಗತಿಯನ್ನು ಸಾರುತ್ತಿವೆ ಎಂದರ್ಥ. "ಸತ್ಯಂ ವದ–ಧರ್ಮಂ ಚರ' ಮೊದಲಾದ ನೀತಿ ಸೂಕ್ತಿಗಳನ್ನು ಸಾಮೂಹಿಕವಾಗಿ ಯಾಂತ್ರಿಕವಾಗಿ ಉಚ್ಚರಿಸಿ ಪ್ರತಿಜ್ಞೆ ಮಾಡಿದ ನಿಮ್ಮಂತಹ ಲಕ್ಷಾಂತರ ಸ್ನಾತಕರೇ ಇಂದು ರಾಜಕೀಯ ರಂಗದಲ್ಲಿ, ಆರ್ಥಿಕ ರಂಗದಲ್ಲಿ, ಶಿಕ್ಷಣ ರಂಗದಲ್ಲಿ ನಿರ್ಲಜ್ಜೆಯಿಂದ ಪಾಪಮಯ ಭ್ರಷ್ಟಾಚಾರಗಳಲ್ಲಿ ತೊಡಗಿ ದೇಶವನ್ನು ದುರ್ಗತಿಗೆ ಒಯ್ಯುತ್ತಿರುವುದನ್ನು ನೆನೆದರೆ ಬದುಕು ಬೆಬ್ಬಳಿಸಿ ಹದುಗುವಂತಾಗುತ್ತದೆ." ಎಂಬ ನುಡಿಯು ಇನ್ನೂ ಹಲವು ರೀತಿಗಳಲ್ಲಿ ರೆಕ್ಕೆಪುಕ್ಕಗಳನ್ನು ಪಡೆದು ದೇಶಪ್ರೇಮ, ಜಾತಿಪ್ರೇಮ, ವ್ಯಕ್ತಿಪ್ರೇಮಗಳ ಸೋಂಕಿಗೂ ಬಲಾಢ್ಯವಾಗಿ ಅಂಟಿಕೊಂಡಿದೆ. ಬರೆಯ ಬಯಸುವವರಿಗೆ ಒಂದು ಎಚ್ಚರಿಕೆ 1973ರ ಈ ಭಾಷಣದಲ್ಲಿ ಹಲವು ಪರಿಹಾರಗಳೂ ಇವೆ. ನಮ್ಮ ಅಧ್ಯಯನ ಎಷ್ಟು ವಿಸ್ತಾರವಾಗಿರಬೇಕು ಎಂಬುದನ್ನು ಸೂಚಿಸುತ್ತಾರೆ. ರಷ್ಯಾ ದೇಶವನ್ನು ಉದಾಹರಣೆ ನೀಡಿದ್ದಾರೆ. ತಾವು ಓದಿದ ಯಾವ ಕೃತಿಯಲ್ಲಿ ಎಷ್ಟು ಪಡೆಯಬೇಕು, ಏನನ್ನು ಪಡೆಯಬೇಕು ಎಂಬ ತನ್ನ ಗ್ರಹಿಕೆಗಳನ್ನೇ ಉದಾಹರಿಸಿದ್ದಾರೆ. ನಾಯಿಯನ್ನು ಸಿಂಹವನ್ನಾಗಿ ತೋರಿಸುವ ಕಾಲದಲ್ಲಿ ನಂಬುವ ನಮ್ಮ ಬುದ್ಧಿ ಸರಿ ಇರಬೇಕು ಎಂಬ ಎಚ್ಚರ ನೀಡುತ್ತಾರೆ. ಇಂದು ಇದೇ ಜಾಸ್ತಿ ನಡೆಯುತ್ತಿರುವುದು.

ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ! ಎಂಬ 1974ರ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟದ ಕಾರ್ಯಕ್ರಮದಲ್ಲಿ ಮಾಡಿದ ಭಾಷಣದ ಚಿಂತನೆಗಳು ಇಂದಿಗೂ ಪಥ್ಯದ ಮಾದರಿಯಲ್ಲಿಯೋ, ಇದೇ ಭಾಷಣವನ್ನು ಮತ್ತೆ ಮತ್ತೆ ಸಾರ್ವಜನಿಕವಾಗಿ ನಿರೂಪಿಸುವಂತಹ ನುಡಿಗಳಿವು. ಸಮಾನತಾವಾದಿ ದೃಷ್ಟಿಕೋನವನ್ನು ಪ್ರತಿಪಾದಿಸುವ ಕುವೆಂಪು ಪುರೋಹಿತ ಶಾಹಿಯ ವಿರೋಧದ ಉದಾಹರಣೆಯೊಂದಿಗೆ ಎಲ್ಲಾ ದಬ್ಬಾಳಿಕೆಗಳ ಮುಖಗಳನ್ನು ಕಳಚುತ್ತಾರೆ. ಇವುಗಳಿಂದ ಬಿಡುಗಡೆಯನ್ನು ಬಯಸುವ ಮನೋಚಿಂತನೆಗಳಿಗೆ ವಿರೋಧದ ಸುಲಭಮಾರ್ಗಕ್ಕಿಂತ ಅಧ್ಯಯನ ಮುಖಿ ಬೌದ್ಧಿಕ ಮಾರ್ಗದ ಕರೆ ನೀಡುತ್ತಾರೆ. ಹಳೆಯ ವಡವೆಯ ನವೀಕರಣದ ಹೊಸ ನಾವೀನ್ಯತೆಯ ಮೂಲನಿಧಿಯ ಉಳಿಕೆಯಂತೆ ನಮ್ಮ ಎಲ್ಲಾ ಹಳೆಯ ವಿಚಾರ,

ಸಾಹಿತ್ಯ, ಅನುಭವಗಳನ್ನು ಉಳಿಸಿಕೊಳ್ಳುವ ಜವಾಬ್ದಾರಿಯನ್ನು ಚರ್ಚಿಸಿದ್ದಾರೆ. ವೈಚಾರಿಕ ಚಿಂತನೆಗಳನ್ನು ಸ್ವೀಕರಿಸುವ ಬೌದ್ಧಿಕ ಮಾರ್ಗಗಳು ಇಂದಿಗೆ ವಿವಿಧ ಮಾರ್ಗಗಳಲ್ಲಿ ಕವಲೊಡೆದುದೇ ದುರಂತವಾಗಿದೆ. ಅದರಿಂದಾಚೆಗೆ ಕವಿತೆ, ಕಥೆ ಮೊದಲಾದಂತೆ ಯಾವುದೇ ಸಾಹಿತ್ಯ ಮಾರ್ಗವೂ ಸಹಾಯ ಮಾಡಲಾರದು. ಅವುಗಳನ್ನು ಗ್ರಹಿಸಿಕೊಳ್ಳುವ ಮನೋವಿಫಲತೆಗಳು ಸಿದ್ಧವಾಗಬೇಕಿದೆ. ಆ ಸಿದ್ಧತೆಯಲ್ಲಿಯೇ ಹೊಸ ಸ್ವರೂಪದ ಬದಲಾವಣೆಗಳು ಲಭ್ಯವಾಗುತ್ತಾ ವೈಚಾ- ರಿಕತೆಯ ಸರಿಯಾದ ಗ್ರಹಿಕೆ ಲಭ್ಯವಾಗಬಹುದು.

ಈ ಎರಡೂ ಲೇಖನಗಳು ಇಂದಿನ ಯುವ ಸಮುದಾಯಕ್ಕೂ, ಬರಹಗಾರರಿಗೂ ಮೌಲ್ಯಗಳನ್ನು ಹಾಗೂ ಎಚ್ಚರಿಕೆಗಳನ್ನು ತಿಳಿಸುತ್ತವೆ. ಅಂದಿನ ಪ್ರಜ್ಞೆಗಳನ್ನು ಎಚ್ಚರಗೊಳಿಸಲು ಕುವೆಂಪು ತಾಳಿದ ನಿಲುವಿನಲ್ಲಿ ಈ ಪ್ರಜ್ಞೆಯು ಅಷ್ಟೇನು ಪ್ರಬಲವಾಗಿರಲಿಲ್ಲ. ಏಕೆಂದರೆ ಇದೇ ಕವಿಯು ತನ್ನ ಯೌವನ ದಿನಗಳಲ್ಲಿ, ಬ್ರಿಟೀಷರ ಆಧಿಪತ್ಯದಲ್ಲಿಯೇ ಸಾಮಾಜಿಕ ವೈಚಾರಿಕತೆಯ ನಾಟಕ ಹಾಗೂ ಕವಿತೆಗಳನ್ನು ಅತ್ಯಂತ ಧೈರ್ಯವಾಗಿ ರಚಿಸಿದರು. ಭಾರತವಿನ್ನು ಪ್ರಜ್ಞೆಗೊಳ್ಳುತ್ತಿದ್ದ ಕಾಲದಲ್ಲಿ ಸ್ವಾತಂತ್ರ್ಯದ ಜೊತೆಗೆ, ಕನ್ನಡತನವು ಜವಾಬ್ದಾರಿಯಾಗಿತ್ತು. ಇಂತಹ ಸಂದರ್ಭದಲ್ಲಿ ಕುವೆಂಪು ಮೊದಲಿಗೆ ಮೌಲ್ಯಗಳನ್ನು ತಾವೆ ಅಳವಡಿಸಿಕೊಂಡರು. ನಂತರ ತನ್ನ ಪ್ರಪಂಚಕ್ಕೆ ಸಾಹಿತ್ಯದ ಮೂಲಕ ಮನೋಚಿಕಿತ್ಸೆಯನ್ನು ಪ್ರಾರಂಭಿಸಿದರು. ವಿಜ್ಞಾನ ಬುದ್ಧಿಗೆ ಮಾತ್ರ ವೈಚಾರಿಕ ಚಿಂತನೆಯು ಮೂಡಲು ಸಾಧ್ಯವೆಂಬ ನಂಬಿಕೆಯನ್ನು ಬರಹದ ಮೂಲಕ ತಾತ್ವಿಕಗೊಳಿಸಿದವರು. ಸಂಯಮ ಪೂರ್ಣವಾದ ಬುದ್ಧಿ ಸ್ವಾತಂತ್ರ್ಯವಾದ ನಿರಂಕುಶಮತಿಯ ಗುಣವನ್ನು ದರ್ಶನ ಮಾಡಿದವರು. ವಿರೋಧಗಳ ಮನೋವೈಕಲ್ಯತೆಗೆ ಪರಿಶೀಲನ ಪಕ್ವತೆಯ ಕನ್ನಡಿಯ ತೋರಿದವರು.

ಈ ಕುವೆಂಪು ಅವರು ರಚಿಸಿದ ಮುಂದಕೆಲ್ಲಿಗೆ ಎಂಬ ವೈಜ್ಞಾನಿಕ ವಿಚಾರಗಳಿರುವ ಕವಿತೆಯ ಮೂಲಕ ಈ ಲೇಖನಕ್ಕೆ ಸಮಗ್ರಿಯ ಸ್ವರೂಪವನ್ನು ನಿರ್ಮಿಸಬಹುದೆಂದು ಭಾವಿಸಿದ್ದೇನೆ.

ಈ ಬದುಕು ಚಲನಶೀಲವಾದುದು. ವಿಕಾಸದ ಮಾರ್ಪಾಡಿನಲ್ಲಿ ನಿತ್ಯವೂ ಹೊಸತತ್ವಗಳನ್ನು ಈ ಭೂಮಿಗೆ ಚೆಲ್ಲುವ ಹಾಗೂ ಕುತೂಹಲಗಳನ್ನು ಈ ಪ್ರಕೃತಿಯಿಂದಲೇ ಗ್ರಹಿಸುತ್ತಾ, ಉತ್ಪತ್ತಿ ಮಾಡುವ ಮನುಷ್ಯನ ಮನೋಚಿಂತನೆಗೆ ಈ ವಿಕಾಸ ತತ್ವವೇ ಮೂಲಬೇರು. ಕುವೆಂಪು ಅತ್ಯಂತ ಕಿರಿವಯಸ್ಸಿಗೆ 1929ರ ಜನವರಿ 20ರಂದು ರಚಿಸಿದ ಕವಿತೆ ಇದು. ಪ್ರತಿ ಯೌವನಕ್ಕೂ ವಿಜ್ಞಾನದ ತತ್ವವು ಜ್ಞಾನವಾಗಿ ಲಭಿಸಬೇಕು ಎಂಬುದೇ ಕುವೆಂಪು ಬರಹಗಳ ಮೂಲಶೋಧ. ವಿಜ್ಞಾನದ ರಹಸ್ಯದಲ್ಲಿ ಇಂದಿಗೂ 'ಜೀವ ವಿಕಾಸ' ಕುರಿತು ನವೋನ್ವೇಷಣೆ ನಡೆಯುತ್ತಲೇ ಇದೆ. ಸಂಶೋಧಕರು ಹೊಸಗ್ರಹಿಕೆಗಳು ನೀಡುತ್ತಲೇ ಇದ್ದಾರೆ. ಜೀವಪಿಂಡದ ಸೃಷ್ಟಿಯು ಯಾವುದೇ ಪ್ರಾಣಿರೂಪದಲ್ಲಿ ಗ್ರಹಿಸಿಕೊಂಡರೂ, ಇಂದು ಮನುಷ್ಯರೂಪಿ ಆಧುನಿಕ ಸ್ವರೂಪ ಏಕಮುಖವಾಗಿದೆ. ವರ್ತಮಾನದ ನಮ್ಮ ಗ್ರಹಿಕೆಗಳಿಗೆ ಇಂತಹ ವಿಕಾಸವಾದವನ್ನು ತೆರೆದಿಡುವ ಮುಂದಕೆಲ್ಲಿಗೆ ಕವಿತೆಯನ್ನು 'ಕೊಳಲು' ಸಂಕಲನದಿಂದ ಓದಬಹುದು.

ಈ ಭೂಮಿಯ ಸೃಷ್ಟಿ ಕುರಿತು ಹಲವು ಅಧ್ಯಯನಗಳು ನಡೆದಿವೆ. ಒಂದು ಜನ್ಮ ಪೂರ್ತಿ ಓದಿ ಮುಗಿಸಲಾರದಷ್ಟು ಸಂಶೋಧನೆಗಳು ನಡೆದಿವೆ. ಈ ಜೀವ ವಿಕಾಸ ಕುರಿತು 1858ರಲ್ಲಿಯೇ ಚಾರ್ಲ್ಸ್ ಡಾರ್ವಿನ್ ಮತ್ತು ಆಲ್ಫ್ರೆಡ್ ವಾಲೇಸ್ ಅವರು ತಮ್ಮ ವಿಚಾರಗಳನ್ನು ಮಂಡಿಸಿದರು. ಜೊತೆಯಲ್ಲಿ ಜಗತ್ತಿನ ಕಣ್ಣು ತೆರೆದರು. 370 ಕೋಟಿ ವರ್ಷಗಳ ಹಿಂದೆಯೇ ವಿಭಿನ್ನವಾದ ಸೂಕ್ಷ್ಮಾಣು ಜೀವಿಗಳೂ ಭೂಮಿಯಲ್ಲಿದ್ದವು ಎಂದು ವೊಲ್ಲೊಂಗಾಂಗ್ ವಿಶ್ವವಿದ್ಯಾಲಯದ ಅಲೆನ್ ನಟ್‌ಮನ್ ವಿವರಿಸಿದ್ದಾರೆ. ಸದ್ಯ ಭೂಮಿಯ ಆಯಸ್ಸು 454ಕೋಟಿ ವರ್ಷಗಳೆಂದು ಗುರ್ತಿಸಲಾಗಿದೆ. ಮುಂದಕೆಲ್ಲಿಗೆ ?

ಕವಿತೆಯು ಈ ಜೀವ ವಿಕಾಸದ ಮೊದಲ ಹೆಜ್ಜೆಗಳನ್ನು ನೆನೆಯುತ್ತಲೇ ಇಂದು ನಾಗರೀಕ ಮನುಷ್ಯ ರೂಪವನ್ನು ದರ್ಶಿಸುತ್ತಾ ಅದರ ವೈಜ್ಞಾನಿಕ ಕುತೂಹಲಗಳನ್ನು ತೆರೆದಂಚಿದ್ದಾರೆ.

ಮೊದಲನರಿಯದಾದಿಯಿಂದ
ಆದಿ ತಿಮಿರದುದರದಿಂದ
ಮೂಡಿ ಬಂದೆನು;
ಯಾರ ಬಯಕೆ ಎಂಬುದರಿಯೆ;
ಏಕೆ ಎಲ್ಲಿಗೆಂಬುದರಿಯೆ;
ಮುಂದೆ ಹರಿಯುವೆ !

ಇಂದಿಗೂ ತಿಳಿಯದ ಮೊದಲ ವಿಕಾಸದಿಂದ ನಾವು ಜನ್ಮಿಸಿದ್ದೇವೆ. ಬಹು ಪೂರ್ವದ ಕತ್ತಲ ಗರ್ಭದಿಂದ ನಮ್ಮ ವಿಕಾಸವು ಮೂಡಿಬಂದಿದೆ. ಇದು ಯಾರ ಇಷ್ಟದ ಫಲವೆಂದು ಯಾರು ಕೂಡ ಗ್ರಹಿಸಲಾಗದು. ಏಕೆ ಇಲ್ಲಿಗೆ ಬಂದಿದ್ದೇವೆ ಎಂಬುದು ತಿಳಿಯದಾಗಿದ್ದೇವೆ. ಒಬ್ಬೊಬ್ಬರದೊಂದು ಆಕಾರ, ಮನೋಸ್ವಿಕಾರ. ಅಂತೂ ಎಲ್ಲರೂ ನಮ್ಮ ನಮ್ಮ ಕಾಲದಲ್ಲಿ ಜನಿಸಿ, ಅಂತ್ಯಗೊಳ್ಳುತ್ತೇವೆ. ಅನಿಸಿದ ಬಯಕೆಗಳನ್ನು ಹಂಬಲಿಸುತ್ತೇವೆ. ಅಂತೂ ಜೀವಸೃಷ್ಟಿಯ ಕಣವಾದ ನಾನು ಈ ರೀತಿಯಲ್ಲಿ ಸೃಷ್ಟಿಗೊಂಡು ಮುಂದೆ ಸಾಗುತ್ತಿರುವೆ. ಇಲ್ಲಿ ಹರಿಯುವಿಕೆ ಎಂಬುದರಲ್ಲಿಯೇ ವಿಕಾಸದ ತತ್ವವು ಸಂಕಲನವಾಗಿದೆ.

ಮಲಗಿ ಕಲ್ಲು ಮಣ್ಣುಗಳಲಿ,
ಜಡ ಸುಷುಪ್ತಿಯಲ್ಲಿ ಬಳಲಿ
ಯುಗಗಳಾದುವು!
ಸಸ್ಯಗಳಲಿ ಕನಸು ಕಂಡು,
ಹುಟ್ಟು ಬಾಳು ಸಾವನುಂಡು
ಕಲ್ಪ ಹೋದುವು !

ನಿದ್ರೆಯು ವಿಶ್ರಾಂತಿಯ ಜೊತೆಗೆ, ಜಡದ ಸಂಕೇತವಾಗಿದೆ. ಈ ಕಲ್ಲು ಮಣ್ಣುಗಳ ರೀತಿಯಲ್ಲಿ ಜಡದ ಸ್ವರೂಪವೂ ನಾವಾಗಿದ್ದೇವೆ. ಆ ಚಲನೆಯಿಲ್ಲದ ನಿದ್ರಾವಸ್ಥೆಯಲ್ಲಿ ಬಳಲಿದ್ದೇವೆ. ಅದು ಅಜ್ಞಾನದ ಸಂಕೇತವಾಗಿಯೂ ನಾವು ಕಳೆದ ಇಷ್ಟು ಶತಮಾನಗಳ ಯುಗ ಯುಗಗಳನ್ನು ಕವಿ ಇಲ್ಲಿ ಚಿಂತಿಸಿದ್ದಾರೆ. ಎಚ್ಚರದಲ್ಲಿ ಬದುಕಿದ್ದು ಕಡಿಮೆ. ಯಾವುದು ವಿಕಾಸದ ಸ್ವರೂಪದಲ್ಲಿ ಮೂಡಿಬಂದಿದೆಯೋ ಅಷ್ಟೇ ನಾವು ಎಚ್ಚರದಲ್ಲಿ ಸೃಷ್ಟಿಸಿದ್ದು ಎನ್ನಬಹುದು. ಪ್ರಾಣಿ, ಪಕ್ಷಿಗಳಲ್ಲಿ ನಮ್ಮ ಭಾವಗಳನ್ನು ಬರೆಯುತ್ತಾ, ಈ ಪ್ರಕೃತಿಯಲ್ಲಿಯೇ ಮುಕ್ತವಾದ ಕನಸು ಕಾಣುತ್ತಾ ನಿತ್ಯವೂ ಕಷ್ಟಗಳ ಎದುರು ನಿಂತು ಹುಟ್ಟು-ಸಾವುಗಳನ್ನು ಅನುಭವಿಸುತ್ತಾ ಬರಿ ಕಲ್ಪನೆಗಳಲ್ಲಿಯೇ ಕಾಲಕಳೆದೆವು.

ಮರಳಿ ಮೈಯ ತಿಳಿದು ತಿರುಗಿ
ಮಿಗಗಳಂತೆ ಮೂಡಿ ಮರುಗಿ
ಬಹಳ ಬಳಲಿದೆ.
ಇಂದು ಮನುಜ ಜನ್ಮದಲ್ಲಿ
ಬಂದು ಹಾಡುತಿರುವೆನಿಲ್ಲಿ !

ಮುಂದಕೆಲ್ಲಿಗೆ ?

ನಮ್ಮ ಅಜ್ಞಾನದ ಅರಿವು ನಮಗೆ ಸ್ಪಷ್ಟವಾಗುತ್ತಾ ಈ ದೇಹದ ಸೃಷ್ಟಿಯ ಜ್ಞಾನವನ್ನು ಅರಿತು, ಮತ್ತೆ ಪ್ರಾಣಿಗಳಂತೆ ಮರೆತು ನಮ್ಮ ತಪ್ಪುಗಳ ನಾವೇ ಅರಿತು ಪ್ರತಿನಿತ್ಯ ಬಹಳ ನೋಯುತ್ತೇವೆ. ಇಂತಹ ಪ್ರಕೃತಿ ಜನ್ಯವಾದ ಬಾಳ್ವೆಯಲ್ಲಿ ಮನುಷ್ಯ ಜನ್ಮವನ್ನು ಪಡೆದು ಜೀವಿಸುತ್ತಿರುವೆ. ಮುಂದೆ ನಮ್ಮ ವಿಕಾಸದ ಹಾದಿ ಎಲ್ಲಿಗೆ ಎಂಬ ಪ್ರಶ್ನೆಯು ಕವಿಯಲ್ಲಿ ಮೂಡಿರುವುದು ಸ್ಪಷ್ಟವಾಗಿದೆ. ಮನುಜನಾಗುವುದು ಎಂದರೆ ಜ್ಞಾನ, ನಾಗರೀಕತೆ, ವಿಕಾಸ ಹೊಂದುವುದು ಎಂದರ್ಥ. ಅಂತಹ ಮನುಜ ವಿಕಾಸವನ್ನು ಪಡೆದು ಬಂದು ಹಾಡುತ್ತಿರುವೆನು ಎಂದರೆ ಜೀವಿಸುತ್ತಿರುವೆನು ಎಂದಿದ್ದಾರೆ.

ಈ ಮುಂದಕೆಲ್ಲಿಗೆ ಕವಿತೆಯು ನಮ್ಮ ಮನೋಚಿಂತನೆಗಳನ್ನು ವೈಜ್ಞಾನಿಕವಾಗಿ ವಿಕಾಸಗೊಳಿಸುವ ತತ್ವದ ಒಂದಂಶವನ್ನು ತೆರೆದಿಟ್ಟದ್ದು ಅರ್ಥಪೂರ್ಣವಾಗಿದೆ. ತೊಂಬತ್ತನಾಲ್ಕು ವರ್ಷಗಳ ಹಿಂದೆಯೇ ನಮ್ಮ ವಿಕಾಸವನ್ನು ಅರಿಯದಿದ್ದರೆ, ಎಚ್ಚರವಿಲ್ಲದಿದ್ದರೆ ನಾವು ನಮ್ಮ ಸ್ಥಿತಿ, ಪ್ರಗತಿಯ ಗತಿಯನ್ನು ತಲುವುದು ಕಷ್ಟವೆಂಬ ಸೂಚನೆಯನ್ನು ನೀಡುತ್ತಲೇ ಆತ್ಮಸ್ಥೈರ್ಯವನ್ನು ಮೂಡಿಸಿದ್ದಾರೆ.

**ಅಧ್ಯಯನ ಕೃತಿಗಳು:**

1. ನಾರಾಯಣರಾವ್ ಜಿ.ಟಿ., ಕುವೆಂಪು ದರ್ಶನ ಸಂದರ್ಶನ., 2004., ಅತ್ರಿ ಬುಕ್ ಸೆಂಟರ್, ಮಂಗಳೂರು
2. ಕುವೆಂಪು., ವಿಚಾರ ಕ್ರಾಂತಿಗೆ ಆಹ್ವಾನ., 2010., ಕನ್ನಡ ಸಂಸ್ಕೃತಿ ಇಲಾಖೆ., ಬೆಂಗಳೂರು
3. ಭಂಡಾರಿ ಆರ್.ವಿ., ಕುವೆಂಪು: ದೃಷ್ಟಿ–ಸೃಷ್ಟಿ., 2011., ಸುಮುಖ ಪ್ರಕಾಶನ, ಬೆಂಗಳೂರು
4. ಕುವೆಂಪು., ಕೊಳಲು., 2012, ಉದಯರವಿ ಪ್ರಕಾಶನ, ಮೈಸೂರು